KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

Tele: 0836-2215224
e-mail: academic.st@kud.ac.in
website: kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ-580003

No. KU/Aca(S&T)/SBB-166/2026-27/1604 Date: 24 OCT 2026

## ಸುತ್ತೋಲೆ

ವಿಷಯ: ಕ.ವಿ.ವಿ. ಘಟಕ ಮತ್ತು ಸಂಯೋಜಿತ ಬಿ.ಎಡ್ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಬಯೋಮೆಟ್ರಿಕ್ ಪರಿಶೀಲಿಸುವ ಕುರಿತು.

ಉಲ್ಲೇಖ:
1. ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 13, ದಿನಾಂಕ: 26.03.2026.
2. ಕಚೇರಿ ಟಿಪ್ಪಣಿ ಸಂ: ಕವಿವಿ/ಸಿಂಡಿಕೇಟ್/2026-27, ದಿನಾಂಕ: 09.04.2026.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 15.07.2026.
4. ಸಿಂಡಿಕೇಟ್ ಉಪಸಮಿತಿ ಸಭೆ ಜರುಗಿದ ದಿನಾಂಕ: 13.08.2026.
5. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 27.08.2026.

-------

ಕ.ವಿ.ವಿ. ಘಟಕ ಮತ್ತು ಸಂಯೋಜಿತ ಬಿ.ಎಡ್ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಹಾಜರಾತಿಯನ್ನು ಬೆರಳು ಗುರುತು (Biometric) ಮೂಲಕ ನಿರ್ವಹಣೆ ಮಾಡುವ ಕುರಿತಂತೆ ಈ ಕೆಳಗಿನಂತೆ ನಿಯಮಗಳನ್ನು ಪಾಲಿಸಲು ತಿಳಿಸಲಾಗಿದೆ.

1. ಎಲ್ಲ ಬಿ.ಎಡ್ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಬೆರಳು ಗುರುತು (Biometric) ಹಾಜರಾತಿ ಅಳವಡಿಸಿಕೊಂಡ ಬಗ್ಗೆ ವಿಶ್ವವಿದ್ಯಾಲಯಕ್ಕೆ ಮಾಹಿತಿಯನ್ನು ಸಲ್ಲಿಸುವುದು.
2. ಒಂದು ವೇಳೆ ಬಿ.ಎಡ್ ಮಹಾವಿದ್ಯಾಲಯಗಳಲ್ಲಿ ಬೆರಳು ಗುರುತು (Biometric) ಹಾಜರಾತಿಯನ್ನು ಅಳವಡಿಸಿಕೊಂಡಿರದಿದ್ದಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು ಹಾಗೇ ವಿಶ್ವವಿದ್ಯಾಲಯಕ್ಕೆ ಮಾಹಿತಿಯನ್ನು ಸಲ್ಲಿಸುವುದು.
3. ಪ್ರತಿದಿನ ತರಗತಿಗಳು ಪ್ರಾರಂಭವಾಗುವ ಮೊದಲು ಹಾಗೂ ತರಗತಿಗಳು ಮುಗಿದ ನಂತರ ವಿದ್ಯಾರ್ಥಿಗಳ ಬೆರಳು ಗುರುತು (Biometric) ಹಾಜರಾತಿಯ ಎಲ್ಲ ವರದಿಗಳನ್ನು ಕಡ್ಡಾಯವಾಗಿ ಸಂಗ್ರಹಿಸಿ ಇಡುವುದು.
4. ಬೆರಳು ಗುರುತು (Biometric) ಜೊತೆಗೆ ಹಾಜರಾತಿ ಪುಸ್ತಕದಲ್ಲಿಯು ಸಹಿತ ವಿದ್ಯಾರ್ಥಿಗಳ ಸಹಿ ಪಡೆದುಕೊಳ್ಳುವುದು.
5. ಬಿ.ಎಡ್ ಮಹಾವಿದ್ಯಾಲಯದ ಆವರಣ ಮತ್ತು ಕೊಠಡಿಗಳಲ್ಲಿ CC TV Camara ಗಳನ್ನು ಅಳವಡಿಸಿಕೊಳ್ಳುವುದು.
6. ಪ್ರತಿ ದಿನದ ವಿದ್ಯಾರ್ಥಿಗಳ / ಎಲ್ಲ ಸಿಬ್ಬಂದಿಗಳ ಬೆರಳು ಗುರುತು (Biometric) ಹಾಜರಾತಿಯ ಯಾದಿಗಳನ್ನು ಮತ್ತು ಹಾಜರಾತಿ ಪುಸ್ತಕವನ್ನು ಕಡ್ಡಾಯವಾಗಿ ದಿನಾಂಕವಾರು ಕಾಯ್ದಿರಿಸಿಕೊಂಡು ವಿಶ್ವವಿದ್ಯಾಲಯದ ಸಮಿತಿ ಅಧ್ಯಕ್ಷರು / ಸದಸ್ಯರು ಭೇಟಿ ನೀಡಿದಾಗ ಕಡ್ಡಾಯವಾಗಿ ಪರಿಶೀಲನೆಗಾಗಿ ಸಲ್ಲಿಸುವುದು.

ಮೇಲ್ಕಾಣಿಸಿದ ಮಾಹಿತಿಗಳ ಕ್ರಮ ವಹಿಸಿದ / ವಹಿಸುವ ಬಗ್ಗೆ ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಬಿ.ಎಡ್ ಮಹಾವಿದ್ಯಾಲಯಗಳ ಪ್ರಾಚಾರ್ಯರು 10 ದಿನಗಳೊಳಗಾಗಿ ಮಾಹಿತಿ ಪೂರೈಸಲು ಈ ಮೂಲಕ ತಿಳಿಸಲಾಗಿದೆ.

24/10/26
ಕುಲಸಚಿವರು

ಗೆ,
ಪ್ರಾಚಾರ್ಯರು, ಕ.ವಿ.ವಿ. ಘಟಕ ಮತ್ತು ಸಂಯೋಜಿತ ಬಿ.ಎಡ್ ಮಹಾವಿದ್ಯಾಲಯಗಳು.

**ಪ್ರತಿ ಮಾಹಿತಿಗಾಗಿ:**

1. ಡಾ(ಶ್ರೀಮತಿ) ಎನ್.ಸಿ.ಪಾಟೀಲ, ಸಿಂಡಿಕೇಟ್ ಸದಸ್ಯರು ಹಾಗೂ ಸಮಿತಿ ಅಧ್ಯಕ್ಷರು, ಪ್ರಾಚಾರ್ಯರು, ಕೆಎಲ್ಇ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ದುರ್ಗಾದೇವಿ ದೇವಸ್ಥಾನ ಹತ್ತಿರ, ಧಾರವಾಡ-580008.
2. ಡಾ. ಬಿ.ಬಿ.ಹೋಳಗುಂದಿ, ಸಿಂಡಿಕೇಟ್ ಸದಸ್ಯರು ಹಾಗೂ ಸಮಿತಿ ಸದಸ್ಯರು, ಪ್ರಾಚಾರ್ಯರು, ಕೆವಿವಿಎಸ್ ಜಗದ್ಗುರು ಪಂಚಾಚಾರ್ಯ ಶಿಕ್ಷಣ ಮಹಾವಿದ್ಯಾಲಯ, ಹತಲಗೇರಿ ರಸ್ತೆ, ಗದಗ-582101.
3. ಡಾ. ಶೌಕತ್ ಅಝೀಮ್, ಹಾಗೂ ಸಮಿತಿ ಸದಸ್ಯರು, ಡೀನರು, ಸಮಾಜವಿಜ್ಞಾನ ನಿಖಾಯ, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ. ಧಾರವಾಡ.
4. ಉಪಕುಲಸಚಿವರು, ಹಾಗೂ ಸಮಿತಿ ಕಾರ್ಯದರ್ಶಿಗಳು, ವಿದ್ಯಾಮಂಡಳ ವಿಭಾಗ, ಕ.ವಿ.ವಿ. ಧಾರವಾಡ.